ದಿನಾಂಕ 09-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : 2 ನೇ ಪ್ರತಿವಾದಿ ಪರ ಶ್ರೀ. ಕೆ.ಎಸ್.ಆರ್. ವಕೀಲರಿಂದ

1. ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನನ್ನ ತಂದೆಗೆ ಒಟ್ಟು 3 ಜನ ಸಹೋದರರು, ಅವರೆಂದರೆ ನನ್ನ ತಂದೆ ಬಡೇಸಾಬ್, ಅಬ್ದುಲ್ ಅಜೀಜ್ ಮತ್ತು ನೂರುದ್ದೀನ್. ನನ್ನ ತಂದೆ ಹಾಗೂ ಅವರ ಇಬ್ಬರು ಸಹೋದರರು, ನನ್ನ ಅಜ್ಜ ಮೃತಪಟ್ಟ ನಂತರ ಕುಟುಂಬದ ಆಸ್ತಿಗಳನ್ನು ಹಂಚಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳು ಮೊದಲು ನನ್ನ ತಂದೆ ಹೆಸರಿನಲ್ಲಿದ್ದವು ಎಂದರೆ ಸರಿ. ಜಂಬಲದಿನ್ನಿ ಗ್ರಾಮದಲ್ಲಿ ನನ್ನ ತಂದೆಯ ಹೆಸರಿನಲ್ಲಿ ಜಮೀನುಗಳು ಇದ್ದವು ಎಂದರೆ ಸರಿಯಲ್ಲ. ಜಂಬಲದಿನ್ನಿ ಗ್ರಾಮದಲ್ಲಿ, ಜಮೀನು ಸರ್ವೆ ನಂ. 192 ಕ್ಷೇತ್ರ 4 ಎಕರೆ 18 ಗುಂಟೆ, ಸರ್ವೆ ನಂ. 127 ಕ್ಷೇತ್ರ 9 ಎಕರೆ 18 ಗುಂಟೆ, ಸರ್ವೆ ನಮ. 128 ಕ್ಷೇತ್ರ 8 ಎಕರೆ 16 ಗುಂಟೆ, ಸರ್ವೆ ನಂ. 127 ಕ್ಷೇತ್ರ 2 ಎಕರೆ 27 ಗುಂಟೆ ಜಮೀನುಗಳು ನನ್ನ ತಂದೆಯ ಹೆಸರಿನಲ್ಲಿದ್ದವು ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಕಲ್ಲೂರು ಗ್ರಾಮದ ಜಮೀನು ಸರ್ವೆ ನಂ. 273/5 ಕ್ಷೇತ್ರ 3 ಎಕರೆ 25 ಗುಂಟೆ, 273/4 ಕ್ಷೇತ್ರ 2 ಎಕರೆ 17 ಗುಂಟೆ, 273/7 ಕ್ಷೇತ್ರ 2 ಎಕರೆ 33 ಗುಂಟೆ, 310 ಕ್ಷೇತ್ರ 9 ಎಕರೆ 38 ಗುಂಟೆ ಜಮೀನುಗಳನ್ನು ನನ್ನ ತಂದೆ ನನ್ನ ಮತ್ತು 1 ನೇ ವಾದಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಅವುಗಳನ್ನು ಸ್ವಂತ ಖರೀದಿ ಮಾಡಿರುತ್ತೇವೆ ಎಂದು ಹೇಳುತ್ತಾರೆ. ಸದರಿ ಜಮೀನುಗಳನ್ನು ಖರೀದಿ ಮಾಡಿದಾಗ 2 ನೇ ಪ್ರತಿವಾದಿ ಸುಮಾರು 8-9 ವರ್ಷ ವಯಸ್ಸಿನವನು ಇದ್ದ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ನಮ್ಮ ತಂದೆಯ ಹೆಸರಿನಲ್ಲಿದ್ದರೂ ಅವುಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು 2 ನೇ ಪ್ರತಿವಾದಿಗೆ ಪಾಲು ಬರುತ್ತದೆ, ಕಾರಣ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಖರೀದಿಸಿದಾಗ ನಮಗೆ 30 ವರ್ಷ ವಯಸ್ಸು ಇತ್ತು. ಆ ಸಮಯದಲ್ಲಿ 2 ನೇ

ಪ್ರತಿವಾದಿಯ ವಯಸ್ಸು 26 ವರ್ಷ ಇತ್ತು. ಆ ಸಮಯದಲ್ಲಿ 2 ನೇ ಪ್ರತಿವಾದಿಯ ವಯಸ್ಸು 26 ವರ್ಷ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾವು ಒಕ್ಕಲುತನ ಕೆಲಸ ಬಿಟ್ಟು ಬೇರೆ ಯಾವ ಕೆಲಸ ಮಾಡುತ್ತಿರಲಿಲ್ಲ. ಒಕ್ಕಲುತನ ಕೆಲಸದಿಂದ ಬಂದ ಸಂಪಾದನೆಯಿಂದ ಆಸ್ತಿಗಳು ಖರೀದಿ ಮಾಡಲು ಸಾಕಾಗುವುದಿಲ್ಲ ಎಂದರೆ ಸರಿಯಲ್ಲ. ಆಸ್ತಿಗಳನ್ನು ಖರೀದಿಸುವಾಗ ನನ್ನ ಹೆಸರಿನಲ್ಲಿ ಬೇರೆ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಹೆಸರಿನಲ್ಲಿ ಜಮೀನು ಸರ್ವೆ ನಂ. 274 ಇತ್ತು. ಸದರಿ ಆಸ್ತಿ ನಾನು ನನ್ನ ಚಿಕ್ಕಪ್ಪ ನೂರುದ್ದೀನ್ ಇವರಿಂದ ಪಡೆದಿರುತ್ತೇನೆ. ಸದರಿ ನೂರುದ್ದೀನ್ ಇವರು ಸ್ವತಃ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿರುತ್ತಾರೆ. ಸದರಿ ನೂರುದ್ದೀನ್ ಇವರಿಗೆ ಮಕ್ಕಳು ಇರುತ್ತಾರೆ. ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ನೂರುದ್ದೀನ್ ಇವರು ಆಸ್ತಿಗಳನ್ನು ಅದಲುಬದಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 3 ಮತ್ತು 4 ನನ್ನ ಸಹೋದರಿಯರು.

3. ನನ್ನ ತಂದೆ ಬಡೇಸಾಬ್ ಇವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. 4 ನೇ ಪ್ರತಿವಾದಿಗೆ 6 ಜನ ಹೆಣ್ಣುಮಕ್ಕಳು ಹಾಗೂ ಇಬ್ಬರು ಗಂಡುಮಕ್ಕಳು ಎಂದರೆ ಸರಿ. ಸದರಿ 6 ಜನ ಹೆಣ್ಣುಮಕ್ಕಳ ಪೈಕಿ ತಾಹೇರಾ ಬೇಗಂ ಮತ್ತು ಶಕೀಲಾ ಮೃತಪಟ್ಟಿರುತ್ತಾರೆ ಎಂದರೆ ಸರಿ. ತಾಹೇರಾ ಬೇಗಂ ಇವರಿಗೆ ಮಕ್ಕಳು ಇರುತ್ತಾರೆ. ನನ್ನ ತಂದೆ ಜಂಬಲದಿನ್ನಿ ಗ್ರಾಮದಲ್ಲಿರುವ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಕಲ್ಲೂರು ಗ್ರಾಮದಲ್ಲಿ ನಮ್ಮ ಹೆಸರಿನಲ್ಲಿ ಖರೀದಿಸಿದ ಆಸ್ತಿಗಳಲ್ಲಿ ನನ್ನ ಇತರ ಸಹೋದರಿ ಸಹೋದರರಿಗೆ ಪಾಲು ಬರುತ್ತದೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿದಷ್ಟು ಪಾಲು ನಮಗೆ ಬರುವುದಿಲ್ಲ ಎಂದರೆ ಸರಿಯಲ್ಲ. ಕಲ್ಲೂರು ಗ್ರಾಮದ ಜಮೀನು ಸರ್ವೆ ನಂ. 178 ನನ್ನ ಹೆಸರಿನಲ್ಲಿ ಇಲ್ಲ. ಸರ್ವೆ ನಂ. 274/2 ಕ್ಷೇತ್ರ 6 ಎಕರೆ ನನ್ನ ತಾಯಿ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ

ಎಂದರೆ ಸರಿ. ಸದರಿ ಆಸ್ತಿಯಲ್ಲಿ ಕ್ಷೇತ್ರ 3 ಎಕರೆ, 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ದಾನಪತ್ರದ ಮುಖಾಂತರ ವರ್ಗಾವಣೆ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಜೊತೆಗೆ ನನ್ನ ಮತ್ತು 1 ನೇ ವಾದಿಯ ಹೆಸರಿನಲ್ಲಿರುವ ಆಸ್ತಿಗಳಲ್ಲಿಯೂ ಸಹ ನಮಗೆ, ಎಲ್ಲಾ ಪ್ರತಿವಾದಿಯರಿಗೆ ಕಾನೂನುಬದ್ಧವಾಗಿ ಪಾಲು ಇದೆ ಎಂದರೆ ಸರಿಯಲ್ಲ. ಆಸ್ತಿಗಳನ್ನು ಖರೀದಿಸಲು ನನಗೆ ಯಾವುದೇ ಸ್ವತಃ ಸಂಪಾದನೆ ಇರಲಿಲ್ಲ, ಕಾರಣ ಅವು ನನ್ನ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಇತರೆ ಪ್ರತಿವಾದಿಯರು, ಒಪ್ಪಿಗೆ ಪ್ರತಿವಾದ ಪತ್ರ ಸಲ್ಲಿಸಿರುವುದರಿಂದ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

**ಸಿಜೆ** & ಜೆಎಂಎಫ್‌ಸಿ, ನ್ಯಾಯಾಲಯ, ಮಾನವಿ.